ಗೃಹ ಇಲಾಖೆಯಲ್ಲಿರುವ ಸಿಬ್ಬಂದಿ

೨೧೩೨ ಶ್ರೀ ಪಂಪಾಪತಿ. (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಗೃಹ ಇಲಾಖೆಯಲ್ಲಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ, ಎಷ್ಟು

ಆ) ಈ ಸಿಬ್ಬಂದಿಗಳಿಗೆ ತಗಲುವ ಒಟ್ಟು ವೆಚ್ಚವೆಷ್ಟು (ವೆಚ್ಚದ ವಿವರ ನೀಡುವುದು)

ಇ) ರಾಜ್ಯದಲ್ಲಿರುವ ಒಟ್ಟು ಆರಕ್ಷಕ ಠಾಣೆಗಳೆಷ್ಟು ಹಾಗು ಒಟ್ಟು ಆರಕ್ಷಕರ ಸಂಖ್ಯೆ ಎಷ್ಟು,

ಈ) ಆರಕ್ಷಕರನ್ನು ಜನಸಂಖ್ಯೆಯ ಆಧಾರದ ಮೇಲೆ ನಿಯಮಿಸಿಕೊಳ್ಳಲಾಗುವುದೇ, ಹಾಗಿದ್ದಲ್ಲಿ ಆದರ ಅನುಪಾತವೇನು,

ಉ) ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳಲ್ಲಿರುವಂತೆ ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರಕ್ಷಕ ಠಾಣೆಯನ್ನು ತೆರೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಪೋಲೀಸ್ ಇಲಾಖೆಯ ಸಿಬ್ಬಂದಿ.—

ಪೋಲೀಸ್ ಸಿಬ್ಬಂದಿ	೪೭,೧೧೨
ಲಿಪಿಕ ಸಿಬ್ಬಂದಿ	೨,೨೧೮

ಆ) ಸಂಬಳ ೯೧.೨೬ ಕೋಟಿ ರೂ.

ಆ) ಪ್ರಯಾಣ ಭತ್ಯೆ ೩.೯೬ ಕೋಟಿ ರೂ. (ಫೆಬ್ರವರಿ ೧೯೮೮ರ ವರೆಗೆ)

ಇ) ಪೋಲೀಸ್ ಠಾಣೆಗಳು ೬೭೬

ಪೋಲೀಸ್ ಔಟ್‌ಪೋಸ್ಟ್‌ಗಳು ೩೦೫

ಪೋಲೀಸ್ ಸಿಬ್ಬಂದಿ (ಸಿವಿಲ್) ೨೯,೪೦೬

ಈ) ಪೋಲೀಸ್ ಠಾಣೆಗಳನ್ನು ಸ್ಥಾಪಿಸಲು ಇದೂ ಒಂದು ಮಾನದಂಡವಾಗಿರುತ್ತೆ.

ಉ) ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ನಂತರ ಈ ವಿಷಯವನ್ನು ಪರಿತೀಲಿಸಲಾಗುವುದು.

ಡಿವಿಜನ್ ಕಂಟ್ರೋಲರ್ ಮತ್ತು ಡಿಪೊ ಮ್ಯಾನೇಜರ್ ಕೆ. ಎಸ್ ಆರ್. ಟಿ. ಸಿ. ಬಸ್ಸಿನಲ್ಲಿ ಪ್ರಯಾಣ ಮಾಡುವುದು.

೨೧೧೯. ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ) — ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರತಿ ಒಂದು ಡಿವಿಜನ್ ನಿಂದ ಡಿವಿಜನಲ್ ಕಂಟ್ರೋಲರ್ ಮತ್ತು ಡಿಪೋ ಮ್ಯಾನೇಜರು ತಮ್ಮ ಹುದ್ದೆಗೆ ಬರಲು ಕ. ರ. ರಾ. ಸಾ. ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣ ಮಾಡಬೇಕೆಂಬ ನಿಯಮವೇನಾದರೂ ಇದೆಯೇ ?

ಆ) ಬೆಳಗಾವಿ ಡಿವಿಜನ್‌ನಲ್ಲಿರುವ ಡಿವಿಜನಲ್ ಕಂಟ್ರೋಲರ್‌ರವರು ಬೆಳಗಾವಿ ಜಿಲ್ಲೆಯಲ್ಲಿ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಎಷ್ಟು ದಿವಸ (ರೆಗ್ಯೂಲರ್ ಕ. ರಾ. ರ ಸಾ. ಸಂಸ್ಥೆ ಬಸ್ಸು) ಪ್ರಯಾಣವನ್ನು ಕೈಗೊಂಡಿರುವರು ಯಾವ ಯಾವ ದಿವಸ ಯಾವ ಯಾವ ಊರಿಗೆ ಎಲ್ಲಿಂದ ಎಲ್ಲಿಗೆ ಪ್ರವಾಸ ಕೈಗೊಂಡಿರುವವರು ಪೂರ್ಣ ವಿವರ ನೀಡುವುದು ?